ಬಸ್ರೆಂಗಾಗ್ತಳೆ ಬೊಸುಡಿಕೆ. ನನ್ನ ಮಗಳ್ಗೆ ಮಿಂಡ್ಗಾರನ್ನ ಕಟ್ತೆಯ...'' ರಂಗಶ್ಯಾಮಣ್ಣ ಮಧ್ಯದಲ್ಲಿ ಬಾಯಿ ಹಾಕಿ, ''ಒಳಕ್ಕೆ ನಡಿರಮ್ಮ ಕುಂತ್ಕಂಡ್ ಮಾತಾಡಾನ'' ಎಂದು ಬೇಡಿಕೊಂಡಿದ್ದ. ಹುಡುಗಿಗೆ ನಿನ್ನೆ ಬೈದದ್ದು ಇವರಿಗೆ ಹೆಂಗೆ ತಿಳಿತು ಎಂದು ಮುದ್ದನುಮಕ್ಕ ಕಕರು ಮಕರಾಗಿದ್ದಳು. ''ಇನ್ನ ನಿಮ್ಮನೆಗೆ ಕಾಲಿಟ್ರೆ ಮೆಟ್ನಾಗಾಕ್ರಿ, ನಮ್ಮುಡ್ಗಿನ ಇಲ್ಲೆ ಬಿಟ್ರೆ ಹೆಣ ತಗಂಡು ಹೋಗ್ಬೇಕಾಗ್ತದೆ.'' ಎಂದು ಹುಡುಗಿಯ ಚಿಕ್ಕಪ್ಪ ಅಬ್ಬರಿಸಿದ್ದ. ಆಗ ಹುಡುಗಿಯ ಭಾವ ಪ್ಯಾಂಟಿನೊಳಗಿಂದ ದೊಡ್ಡ ಜಾಮಿಟ್ರಿ ಬಾಕ್ಸಿನಷ್ಟಿದ್ದ ಮೊಬೈಲ್ ಫೋನ್ ತೆಗೆದು ಕನ್ನಡಿಯಂತಿದ್ದ ಸ್ಕ್ರೀನ್ ಮೇಲೆ ಮೂರ್ನಾಲ್ಕು ಸಾರಿ ಒತ್ತಿದ್ದ. ಅರೆ, ನಿನ್ನೆ ಮುದ್ದನುಮಕ್ಕ ಸೊಸೆಗೆ ಬೈದಿದ್ದ ಇಡೀ ಬೈಗುಳದ ಮಾತುಗಳು ಗೊಂದಳ್ಳಿಯ ಟೆಂಟಿನ ಮೇಲ್ಭಾಗದಲ್ಲಿ ಕಟ್ಟಿದ್ದ ಮೈಕಿನಲ್ಲಿ ಹಾಡುಗಳು ಬರುವಂತೆ ಬಿತ್ತರವಾಗತೊಡಗಿದವು. ಇಡೀ ಕೇರಿಯ ಜನ ಈ ವಿಸ್ಮಯವನ್ನು ಕಣ್ಣು, ಕಿವಿ ತುಂಬಿಸಿಕೊಂಡ ಮೇಲೆ ನಿರ್ಮಲಳ ಅಕ್ಕ, ''ಎಂಥ ಅಮಾನವೀಯ ಜನ ರೀ ನೀವು. ನಿಮ್ಮ ಮೇಲೆ ಡೌರಿ ಕೇಸು, ಡೊಮೆಸ್ಟಿಕ್ ವೊಯಲೆನ್ಸ್ ಕೇಸ್ ಹಾಕ್ತೀವಿ. ನೀವಾಡಿರುವ ಪ್ರತಿ ಮಾತ್ನೂ ನನ್ನ ತಂಗಿ ರೆಕಾರ್ಡ್ ಮಾಡಿ ನನ್ನ ಗಂಡನ ಫೋನಿಗೆ ಕಳ್ಸಿದಾಳೆ. ಇದೊಂದು ಪ್ರೂಫ್ ಸಾಕು ನಿಮ್ಮನ್ನು ಜೈಲಿಗೆ ಕಳಿಸೋಕೆ. ಡೈವೋರ್ಸ್ ನೋಟಿಸ್ ಕಳಿಸ್ತೀವಿ. ಮದುವೆಗೆ ಖರ್ಚಾಗಿರೋ ಎಂಟು ಲಕ್ಷ ರೂಪಾಯಿ ಕಟ್ಟಿಕೊಡ್ರಿ, ಇಲ್ದಿದ್ರೆ ಪ್ರತಿ ತಿಂಗಳು ಹತ್ತು ಸಾವ್ರ ಕ್ಲೈಮ್ ಮಾಡ್ತೀವಿ. ಇನ್ನ ನನ್ ತಂಗೀನ ಬಿಲ್ಕುಲ್ ನಿಮ್ಮನೇಲಿ ಬಿಡಲ್ಲ.'' ಎಂದು ನಯನಾಜೂಕಾಗಿ ಆಡಿದ ಮಾತುಗಳು ಮುದ್ದನುಮಕ್ಕ, ರಂಗಶ್ಯಾಮಣ್ಣರ ಶರೀರದಲ್ಲಿ ತೊಟ ತೊಟ ಬೆವರು ತೊಟ್ಟಿಕ್ಕುವಂತೆ ಮಾಡಿದ್ದವು. ಅದೆ ಸಂದರ್ಭದಲ್ಲಿ ನಿರ್ಮಲಳ ಭಾವನು ಅವಳನ್ನು ಕೈಹಿಡಿದು ಕರೆದುಕೊಂಡು ಹೋಗಿ ಕಾರಲ್ಲಿ ಕೂರಿಸಿದ್ದನು. ಮಿಕ್ಕೆಲ್ಲರೂ ಕಾರು ಹತ್ತಿ, ಕಾರು ಬುರ್‍ರೆಂದು ಹೊರಟಿತು. ತನ್ನ ಹೆಂಡತಿಯನ್ನು ತುಂಬಿಕೊಂಡು ಹೋದ ಕಾರನ್ನು ನೋಡುತ್ತಾ ತಂಗ್ಯಾನು ನೆತ್ತಿಯ ಮೇಲೆ ಟವಲ್ ಹಾಕಿಕೊಂಡು, ಎರಡೂ ಕೈಗಳಿಂದ ತಲೆಯನ್ನು ಹಿಡಿದುಕೊಂಡು, ''ಸ್ವಾಮಿ ರಂಗಧಾಮ, ಏನ್ ಗ್ರಾಚಾರ ಬಂತಪ್ಪ.'' ಎಂದು ಹಟ್ಟಿಯ ಮುಂದೆ ಕುಳಿತುಕೊಂಡ. ನೆರೆದಿದ್ದ ಕೇರಿಯ ಜನ ತಮ್ಮ ತಮ್ಮ ಮನೆಗಳ ಕಡೆ ಹೆಜ್ಜೆ ಹಾಕಿದರು.

### ಕೇಶವರೆಡ್ಡಿ ಹಂದ್ರಾಳ

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕತೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'– ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕತೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ.